ISSN : 2320-0391

# सृजन ಸೃಜನ

हिन्दी-कन्नड साहित्य और संस्कृति ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

जनवरी-मार्च २०१९ त्रैमासिक पत्रिका



Scanned by TapScanner

ISSN : 2320-0391

साहित्य और संस्कृति

# सृजन

## हिंदी-कन्नड त्रैमासिक

वर्ष -7
अंक - 22

सहयोग राशि

पाँच वर्ष - रु. 1500/-
आजीवन - रु. 3000/-

सारे चेक /ड्राफ्ट/मनिऑर्डर, सौम्य प्रकाशन विजयपुर, के नाम से भेजें ।

संपादकीय / व्यवस्थापकीय कार्यालय
सौम्य प्रकाशन
'कबीर कुंज', महाबलेश्वर कॉलनी,
दर्गा जेल के सामने, विजयपुर - 586 103
(कर्नाटक)

**दूरभाष : 9448185705, 9036505655**

Email : srijantraimasik@gmail.com
stmerwade1961@gmail.com

मुद्रक :
**त्वरित मुद्रण आफसेट प्रिन्टर्स**
कागदगेरि गल्ली गदग - 582 101
Email : chaitanyaoffset@gmail.com

प्रधान संपादक
**डॉ. एस. टी. मेरवाडे**
हिंदी विभाग, एस.बी. कला के.सी.पी. विज्ञान महाविद्यालय, विजयपुर

सह संपादक
**डॉ. एस. जे. जहागीरदार**
हिंदी विभाग, अंजुमन कला, विज्ञान एवं वाणिज्य महाविद्यालय, विजयपुर

संपादक मंडल हिंदी
**डॉ. एस. जे. पवार**
हिंदी विभाग, एस.बी. कला के.सी.पी. विज्ञान महाविद्यालय, विजयपुर

**डॉ. एस. एस. तेरदाल**
हिंदी विभाग, जे.एस.एस. कला, विज्ञान एवं वाणिज्य महाविद्यालय, गोकाक

कन्नड
**प्रो. बी. बी. डेंगनवर**
कन्नड विभाग, बसवेश्वर कला एवं वाणिज्य महाविद्यालय, बसवन बागेवाडी जि : विजयपुर

**डॉ. आर. वी. पाटील**
धारवाड

# ಪರಿವಿಡಿ


| | | | |
|---|---|---|---|
| ೧. | ಹಿಂದಿ ಲಘುಕಥೆ | • ಡಾ. ಎಸ್. ಟಿ. ಮೇರವಾಡೆ | ೩೦ |
| ೨. | ವೀಣಾ ಶಾಂತೇಶ್ವರರ ಕಥೆಗಳಲ್ಲಿ ಸ್ತ್ರೀ | • ವಿಕ್ರಮ ಈ. ಬಸನಗೌಡರ | ೩೪ |
| ೩. | ಅಥಣಿ ಪರಿಸರದ ಸಾಂಸ್ಕೃತಿಕ ನೆಲೆಗಳು | • ಶ್ರೀಮತಿ ವಿಜಯಲಕ್ಷ್ಮಿ ಪತ್ತಾರ | ೩೬ |
| ೪. | ಅಲ್ಲಮಪ್ರಭುವಿನ ಭಾಷಾ ಬೆಡಗು | • ಪ್ರೊ. ಗುರುಸ್ವಾಮಿ ಜಿ. ಹಿರೇಮಠ | ೩೯ |
| ೫. | ಕಂಬಾರರ ಮತ್ತು ಲೋಕಾಪುರರ ಕಾದಂಬರಿಗಳಲ್ಲಿ ಸಂಸ್ಕೃತಿಯ ಚಿತ್ರಣ | • ಆನಂದ ಶ್ರೀ ಬೆಳಗಾವಿ | ೪೩ |
| ೬. | ಭಾಷಾಂತರ ಕಲೆ ಒಂದು ಅವಲೋಕನ | • ಡಾ. ಎಂ. ಎಸ್. ಮಾಗಣಗೇರಿ | ೪೭ |
| ೭. | ವಿವೇಕಾನಂದರ ದೃಷ್ಟಿಯಲ್ಲಿ ಗುರು–ಶಿಷ್ಯ ಸಂಬಂಧ | • ಜಿ. ಆರ್. ಅಂಬಲಿ | ೫೨ |
| ೮. | ಕಿತ್ತೂರು ನಾಡಿನ ರಾಣಿ : ಬೆಳವಡಿ ಮಲ್ಲಮ್ಮ | • ನೀಲಪ್ಪ ಎಸ್. ವಾಲೀಕಾರ | ೫೭ |
| ೯. | ಜನಪದ ಸಾಹಿತ್ಯ ರೂಪಗಳಲ್ಲಿ ಕಾವ್ಯಗಳು | • ವಿಠ್ಠಲ ಎಸ್. ಚಿಗರಿ | ೫೯ |
| ೧೦. | ಮಕ್ಕಳ ಲೋಕದ ರಾಜ : ಜಿ. ಪಿ. ರಾಜರತ್ನಂ | • ಗುರುರಾಜ ಜಿ. ಮೇಡಿದಾರ | ೬೩ |


**ಅಂಕಣ–೫**


| | | | |
|---|---|---|---|
| ೧೧. | ನಿಸರ್ಗವನ್ನು ಹೇಗೆ ಪ್ರೀತಿಸಬೇಕು | • ಡಾ. ಆರ್. ವ್ಹಿ. ಪಾಟೀಲ | ೬೯ |


■■



Scanned by TapScanner

# ವಿವೇಕಾನಂದರ ದೃಷ್ಟಿಯಲ್ಲಿ ಗುರು-ಶಿಷ್ಯ ಸಂಬಂಧ

• ಪ್ರೊ. ಜಿ. ಆರ್. ಅಂಬಲಿ

ಗುರು ಶಿಷ್ಯ ಸಂಬಂಧದ ಪರಿಕಲ್ಪನೆ ಹಾಗೂ ಆಚರಣೆಯು ಪ್ರಪಂಚಕ್ಕೆ ಭಾರತವು ನೀಡಿದ ಒಂದು ವಿಶಿಷ್ಟ ಕೊಡುಗೆಯಾಗಿದೆ. ಇದರಲ್ಲಿ 'ಭಾರತೀಯರು' ಎಂದರೆ ಜ್ಞಾನ ನಿರತರು. ವೇದ ಕಾಲಗಳಿಂದಲೂ ಗುರು ಶಿಷ್ಯರ ಸಂಬಂಧ ಸಂಪ್ರದಾಯಗಳಿಂದಲೇ ಉಳಿದು ಬಂದಿದೆ. ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂಬತೆ ವೇದ,ಸಾಹಿತ್ಯ, ನೃತ್ಯ, ವಾದ್ಯ, ಸಂಗೀತ ವಿಜ್ಞಾನ ವಿಷಯಗಳು ಇಂದಿಗೂ ಗುರು-ಶಿಷ್ಯ ಪರಂಪರೆಯ ಅನಿವಾರ್ಯತೆಯಿಲ್ಲದೇ ಮುಂದುವರಿದುಕೊಂಡು ಹೋಗುತ್ತಿರುವುದನ್ನು ಗಮನಿಸಬೇಕು. ಗುರುಶಿಷ್ಯರ ಸಂಬಂಧವೆಂಬುದು ಭಾರತೀಯ ದೃಷ್ಟಿಯಲ್ಲಿ ಕೇವಲ ಭೌತಿಕ ಗುರುವನ್ನು ಮಾತ್ರ ಗುರುವೆಂದು ಪರಿಗಣಿಸಿಲ್ಲ. ಅದರ ಬದಲು 'ಅಕ್ಷರಮಾತ್ರಂ ಕಲಿಸಿದಾತಂ ಗುರುಂ, ಎನ್ನುವಲ್ಲಿಂದ ಪ್ರಾರಂಭಿಸಿ ತಂದೆ, ತಾಯಿ, ಆಚಾರ್ಯ, ಋಷಿ ಮುನಿಗಳಿಗಿಂತಲೂ ಹಿಂದೆ ಹೋಗಿ ಸದಾಶಿವನಾದ ಪ್ರರಬ್ರಹ್ಮನನ್ನೇ ಗುರುವಿನ

ಪರಂಪರೆಯಲ್ಲಿ ಲೀನವಾಗಿಸಿದೆ. ಈ ಪರಂಪರೆಯಯಲ್ಲಿ ವೈಶಂಪಾಯನ-ಯಾಜ್ಞವಲ್ಕ್ಯ, ದ್ರೋಣಾಚಾರ್ಯ-ಏಕಲವ್ಯ, ಮುಂತಾದ ಅನೇಕ ಗುರು-ಶಿಷ್ಯರ ಸಂಬಂಧವನ್ನು ನೋಡಬಹುದು.

ಗುರು-ಶಿಷ್ಯ ಸಂಬಂಧದ ನಿಜವಾದ ಭಾರತೀಯ ದೃಷ್ಟಿ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರ ಒಡನಾಟದಲ್ಲಿ ಕಂಡು ಬರುತ್ತದೆ. ಅವರ ಈ ಸಂಬಂಧ ಹೆಚ್ಚು ಹೆಚ್ಚು ಆಧ್ಯಾತ್ಮಿಕವಾದುದೇ ವಿನಾ ಲೌಕಿಕವಾದುದಲ್ಲ. ಪ್ರಾರಂಭದಲ್ಲಿ ಅವರೀರ್ವರಲ್ಲಿಯ ಗುರುಶಿಷ್ಯರ ಸಂಬಂಧವನ್ನು ನೋಡೋಣ.

ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಒಡನಾಟ ಒಂದು ಭಾರತೀಯ ಆಧ್ಯಾತ್ಮಿಕದಲ್ಲಿ ಒಂದು ಮೈಲಿಗಲ್ಲು. ನರೇಂದ್ರನೆಂಬ ಬಾಲಕ ವಿವೇಕಾನಂದನಾದದ್ದು ಗುರುಶಿಷ್ಯರ ಸಂಬಧದಿಂದಲೇ. ಗುರು ಎಂದರೆ ಶಿಕ್ಷಕ-ಬೋಧಕ-ಅಧ್ಯಾಪಕ-ಉಪಾಧ್ಯಾಯ- ಮಾರ್ಗದರ್ಶಕ-ಆಚಾರ್ಯ ಎಂಬ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಓರ್ವನಿಗೆ ವೃದ್ಧತೆ ಬರುವುದು ವಯಸ್ಸಿನಿಂದಲ್ಲ ಜ್ಞಾನದಿಂದ. ಆ ಜ್ಞಾನಕ್ಕೆ ಮೂಲ ಗುರು. ವಿವೇಕಾನಂದರ ಪ್ರಕಾರ ಗುರುವೆಂದರೆ "ಕೇವಲ ಪುಸ್ತಕ ಪಿಸಾಚಿಯಲ್ಲ. ಸಾಕ್ಷಾತ್ಕಾರವನ್ನು ಪಡೆದವನು, ಸತ್ಯವನ್ನು ಪ್ರತ್ಯಕ್ಷ ಮನಗಂಡವನು. "ನಮ್ಮ ದೇಶದಲ್ಲಿ ಗುರುವನ್ನು ಅತಿ ಪೂಜ್ಯ ದೃಷ್ಟಿಯಿಂದ ನೋಡುತ್ತೇವೆ. ಅವರನ್ನು ದೇವರಂತೆ ಭಾವಿಸುತ್ತೇವೆ. ನಮ್ಮ ತಾಯಿ-ತಂದೆಗಳಿಗೂ ಅಷ್ಟು ಗೌರವವನ್ನು ತೋರುವುದಿಲ್ಲ. ತಾಯಿ-ತಂದೆಯರು ನಮಗೆ ದೇಹವನ್ನು ನೀಡುವರು. ಗುರು ಮುಕ್ತಿ ಮಾರ್ಗವನ್ನು ತೋರುವನು. ನಾವು ಗುರುವಿನ ಮಕ್ಕಳು. ಗುರುವಿಗೆ ಜನರು ತನ್ನನ್ನು ಗೌರವಿಸಬೇಕೇ ಬೇಡವೇ ಎಂಬ ಭಾವನೇ ಇರಲಿಲ್ಲ. ತಾನೊಬ್ಬ ದೊಡ್ಡ ಗುರುವೆಂಬ ಭಾವನೆಯೇ ಆವರಲ್ಲಿರಲಿಲ್ಲ.

ಪ್ರಾಚೀನ ಕಾಲದ ಭರತಖಂಡದ ವಿದ್ಯಾಭ್ಯಾಸದ ರೀತಿ, ಆಧುನಿಕ ವಿದ್ಯಾಭ್ಯಾಸದ ರೀತಿಗಿಂತ ಎಷ್ಟೋ ಭಿನ್ನವಾದುದು. ವಿಜ್ಞಾರ್ಥಿಗಳು ಶುಲ್ಕರೂಪದಲ್ಲಿ ಏನನ್ನೂ ಕೊಡಬೇಕಾಗಿರಲಿಲ್ಲ. ಜ್ಞಾನ ಅತ್ಯಂತ ಪವಿತ್ರ ಅದನ್ನು ಯಾರೂ ಮಾರಕೂಡದು ಎಂದು ಭಾವಿಸಿದ್ದರು. ಜ್ಞಾನ ಉಚಿತವಾಗಿ ಸ್ವೀಕರಿಸುತ್ತಿದ್ದರು. ಇದು ಮಾತ್ರವಲ್ಲ ಅನೇಕ ಗುರುಗಳು ಅವರಿಗೆ ಅಹಾರ, ಬಟ್ಟೆಯನ್ನೂ ಒದಗಿಸುತ್ತಿದ್ದರು.



ಇಂಥಹ ಗುರುಗಳ ಸಂರಕ್ಷಣಾರ್ಥವಾಗಿ ಶ್ರೀಮಂತರು ಮದುವೆ, ಉಪನಯನ, ಶ್ರಾದ್ಧ ಮುಂತಾದ ಸಮಯಗಳಲ್ಲಿ ದಾನ ಮಾಡುತ್ತಿದ್ದರು. ಕೆಲವು ವಿಶೇಷ ಸಂದರ್ಭಗಳಲ್ಲಿ ದಾನಗಳಿಗೆ ಅವರೇ ಪ್ರಥಮ ಮತ್ತು ಹೆಚ್ಚು ಅರ್ಹರು ಎಂಬ ಭಾವನೆಯಿದ್ದಿತು.

ಶ್ರೀ ರಾಮಕೃಷ್ಣ ಪರಮಹಂಸರು ವಿವೇಕಾನಂದರಿಗೆ ಬೋಧಿಸಿದ ಸಂದೇಶ ಜೀವಂತ ಉದಾಹರಣೆ ಯಾಗಿದ್ದುದರಿಂದ ಅವರ ವ್ಯಕ್ತಿತ್ವವೇ ಬೇರೆ ರೂಪ ತಾಳಿತು. ಅವರ ಪ್ರಕಾರ ಎಲ್ಲಾ ಪ್ರಾಪಂಚಿಕ ಜ್ಞಾನಾರ್ಜನೆಯ ಗುರಿ ಜೀವನೋಪಾಯಕ್ಕಾಗಿ ಅಲ್ಲದೆ ಬೇರೆ ಅಲ್ಲ. ನಾವು ಅರ್ಧ ಜೀವಮಾನವನ್ನು ವಿಶ್ವವಿದ್ಯಾಲಯದಲ್ಲಿ ಕಳೆಯುವುದರಿಂದ ನಮ್ಮ ಮನಸ್ಸು ಅನ್ಯರ ಆಲೋಚನಾ ಸಂಗ್ರಹವಾಗಿದೆ. ಇದರಿಂದ ನಾವು ಸ್ವತಂತ್ರವಾಗಿ ವಿಚಾರಿಸುವ, ಚಿಂತಿಸುವ ಸಾಮರ್ಥ್ಯವನ್ನೇ ಕೆಲವು ಮಟ್ಟಿಗೆ ಕಳೆದುಕೊಳ್ಳುತ್ತೇವೆ. ಮನುಷ್ಯ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅವನನ್ನು ತನ್ನಲ್ಲಿ ಅನುಭವಿಸಬೇಕು, ನೋಡಬೇಕು, ಮಾತನಾಡಬೇಕು. ಇದೇ ಧರ್ಮ. ಈ ಧರ್ಮ ಮಾರ್ಗವೇ ರಾಮಕೃಷ್ಣರಲ್ಲಿ ಅದಮ್ಯವಾಗಿತ್ತು. ಅವರು ದಕ್ಷಿಣೇಶ್ವರ ಜಗನ್ಮಾತೆಯ ಮುಂದೆ ಮತ್ತೆ ಮತ್ತೆ ಈ ಕುರಿತಾಗಿ ಪ್ರಶ್ನಿಸುತ್ತಿದ್ದರು. ಕೊನೆ ಕೊನೆಗೆ ದೇವಾಲ್ಯದಲ್ಲಿ ಪೂಜೆ ಮಾಡಲು ಕೂಡಾ ಅವರಿಗೆ ಸಾಧ್ಯವಾಗಲಿಲ್ಲ. ದೇವಾಲಯವನ್ನು ತ್ಯಜಿಸಿ ಹತ್ತಿರದ ಒಂದು ಕಾಡಿಗೆ ಗೋಗಿ ವಾಸ ಮಾಡಿದರು. ಎಷ್ಟೋ ದಿನಗಳ ವರೆಗೆ ಸಮಾಧಿ ಸ್ಥಿತಿಯಲ್ಲೇ ಇರುತ್ತಿದ್ದರು. ದೇವಸ್ಥಾನದ ಗಂಟೆ ಮತ್ತು ಪ್ರಾರ್ಥನಾ ನಿನಾದ ಕಾನನವನ್ನು ಮುಟ್ಟಿದಾಗ ಜಾಗೃತರಾಗಿ ವ್ಯಾಕುಲತೆಯಿಂದ ಅಳುತ್ತಿದ್ದರು. "ಹೇ ತಾಯಿ ! ಮತ್ತೊಂದು ದಿನ ವ್ಯರ್ಥವಾಯಿತು. ನೀನು ಇನ್ನೂ ಬರಲಿಲ್ಲ. ಈ ಜೀವನ್ದ ಅಲ್ಪ ಆಯುಷ್ಯದಲ್ಲಿ ಒಂದು ದಿನ ಕಳೆಯಿತು. ನನಗಿನ್ನೂ ಸತ್ಯದ ಅರಿವಾಗಲಿಲ್ಲ". ದಾರುಣ ಹೃದಯ ಯಾತನೆಯಿಂದ ಕೆಲವು ವೇಳೆ ತಮ್ಮ ಮುಖವನ್ನು ನೆಲಕ್ಕೆ ತೀಡಿ ಅಳುತ್ತಿದ್ದರು. ಇಂತಹ ಅವಿರತ ಪ್ರಯತ್ನದಿಂದಲೇ (ಧ್ಯಾನ ಮತ್ತು ತಪಸ್ಸು) ಅವರು ಸತ್ಯದ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಪರಮಾತ್ಮನ ಅಸ್ತಿತ್ವದ ಕುರಿತಾಗಿ ಡೋಲಾಯಮಾನ ಮಾನಸಿಕ ಸ್ಥಿತಿಗೆ ಗುರಿಯಾಗಿದ್ದ ವಿವೇಕಾನಂದರು ಇವರನ್ನು ಕಂಡು ಪರಿ ಪರಿಯ ಪರೀಕ್ಷೆಗಳ ಮೂಲಕವಾಗಿ ತಮ್ಮ ಗುರುಗಳ ನಿಜವಾದ ಆತ್ಮ ಸಾಕ್ಷಾತ್ಕಾರದ ಅನುಭೂತಿಯನ್ನು ಅರಿತುಕೊಳ್ಳುವಲ್ಲಿ ಸಮರ್ಥರಾದರು. ರಾಮಕೃಷ್ಣ ಪರಮಹಂಸರು ಎಂದಿಗೂ ತಾನು ಹಣವನ್ನು ಮುಟ್ಟುವುದಿಲ್ಲವೆಂದು ಶಪಥ ಮಾಡಿದ್ದರು. ವಿವೇಕಾನಂದರು ಅವರ ಪರೀಕ್ಷೆಗೋಸ್ಕರ ಒಮ್ಮೆ ಅವರ ಹಾಸಿಗೆ ಅಡಿಯಲ್ಲಿ ನಾಣ್ಯವೊಂದನ್ನು ಗುಟ್ಟಾಗಿ ಸೇರಿಸಿಟ್ಟಿದ್ದರು. ರಾಮಕೃಷ್ಣರು ಹಾಸಿಗೆಯಲ್ಲಿ ಬಂದು ಕುಳಿತುಕೊಂಡಾಗ ಅವರಿಗೆ ಚೇಳು ಕಡಿದ ವಿಚಿತ್ರ ಅನುಭವವಾಯಿತು. ತಕ್ಷಣದಲ್ಲಿ ಹಾಸಿಗೆಯನ್ನು ಶೋಧಿಸುವಂತೆ ಶಿಷ್ಯರಿಗೆ ಹೇಳಿದಾಗ, ಹಾಸಿಗೆಯ ಅಡಿಯಲ್ಲಿ ನಾಣ್ಯವು ಕಂಡು ಬಂದಿತು. ಅವರು ನಿದ್ರಿಸುತ್ತಿದ್ದಾಗ ಹಣವನ್ನು ದೇಹಕ್ಕೆ ತಾಗಿಸಿದರೆ ಅವರ ಕೈ ಬಾಗುತ್ತಿತ್ತು. ದೇಹಕ್ಕೆ ಪಾರ್ಶ್ವವಾಯು ಬಡಿದಂತೆ ಕಂಪಿಸುತ್ತಿದ್ದರು. ಎಂತಹ ನಿಃಸ್ಪೃಹ ಜೀವನ ಅವರದು. ಇಂತಹ ನುಡಿದಂತೆ ನಡೆಯುವ, ಆತ್ಮ ಸಾಕ್ಷಾತ್ಕಾರವನ್ನು ಪಡೆದಿದ್ದ ಗುರುವಿನ ಸಾನಿಧ್ಯ ವಿವೇಕಾನಂದರನ್ನು ಮಂತ್ರ ಮುಗ್ಧರನ್ನಾಗಿಸಿತು.

ವಿವೇಕಾನಂದರ ಪ್ರಕಾರ ಯಾರು ತಮ್ಮ ಮಾತಿನಲ್ಲಿ ವ್ಯಕ್ತಿತ್ವವನ್ನು ತುಂಬಬಲ್ಲರೋ ಅಂತಹವರ ಮಾತು ಹೆಚ್ಚು ಪರಿಣಾಮಕಾರಿಯಾಗಿರುವುದು. ಆದರೆ ಅಲ್ಲಿ ಅದ್ವಿತೀಯ ಮಹಿಮಾತಿಶಯವಿರಬೇಕು. ಭೋಧನೆಯೆಲ್ಲ ದಾನ ಮತ್ತು ಸ್ವೀಕಾರದ ಮೇಲಿದೆ. ಗುರು ವಿದ್ಯೆಯನ್ನು ದಾನ ಮಾಡುವನು. ಶಿಷ್ಯ ಅದನ್ನು ಸ್ವೀಕರಿಸುವನು. ಆದರೆ ಒಬ್ಬನಿಗೆ ಕೊಡುವುದಕ್ಕೆ ಏನಾದರೂ ಇರಬೇಕು. ಮತ್ತೊಬ್ಬ ಸ್ವೀಕರಿಸುವುದಕ್ಕೆ ಸಿದ್ಧನಾಗಿರಬೇಕು. "ಯಾರು ಕ್ಷಣದಲ್ಲಿ ಸಹಸ್ರಾರು ಮಂದಿಯಂತೆ ಆಗಬಲ್ಲರೋ ಅವನೇ ನಿಜವಾದ ಗುರು. ತಕ್ಷಣವೇ ಶಿಷ್ಯನ ಮಟ್ಟಕ್ಕೆ ಇಳಿದು ಬಂದು, ತನ್ನ ಶಕ್ತಿಯನ್ನು ಶಿಷ್ಯನಿಗೆ ಕೊಟ್ಟು ಅವನ ಕಣ್ಣಿನ ಮೂಲಕ ನೋಡಬಲ್ಲ. ಕಿವಿಯ ಮೂಲಕ ಕೇಳಬಲ್ಲ. ಅವನ ಮನಸ್ಸಿನ ಮೂಲಕ ಅರಿಯಬಲ್ಲವನೇ ನಿಜವಾದ ಗುರು. ಅಂತಹ ಗುರುವೇ ನಿಜವಾಗಿ ಉಪದೇಶ ಮಾಡಬಲ್ಲ; ಇತರರಲ್ಲ. ವಿವೇಕಾನಂದರು ತಮ್ಮ ಗುರುಗಳ ಕುರಿತಾಗಿ ಅತ್ಯಂತ ವಿನೀತ ಭಾವದಿಂದ ನುಡಿದಿರುವ ಮಾತುಗಳು ಸದಾ ಸ್ಮರಣಾರ್ಹ- ಪ್ರಪಂಚದಲ್ಲಿ ಎಲ್ಲಿಯಾದರೂ ನಾನು ಒಂದು ಸತ್ಯವನ್ನು ಹೇಳಿದ್ದರೆ ಅದು ನನ್ನ ಗುರುವಿನ ಪ್ರಭಾವ; ತಪ್ಪುಗಳು ಮಾತ್ರ ನನ್ನವು" ಎಂತಹ ವಿನಯ ! ಗುರುವಿಗೆ ತಕ್ಕ ಶಿಷ್ಯ ಎನ್ನುವುದರಲ್ಲಿ ಸಂಶಯವಿಲ್ಲ.

ಶಿಕ್ಷಣದ ಕುರಿತಾಗಿ ವಿವೇಕಾನಂದರ ವಿಚಾರಗಳನ್ನು ಅರಿತುಕೊಳ್ಳುವುದರ ಮೂಲಕ ಗುರು ಶಿಷ್ಯರ ಸಂಬಂಧ

ಹೇಗಿರಬೇಕೆಂಬುದನ್ನು ಮತ್ತು ಆ ಕುರಿತಾಗಿ ಅವರ ನಿಲುವನ್ನು ಇನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯ. ವಿವೇಕಾನಂದರ ಪ್ರಕಾರ ವಿದ್ಯೆ ಕೇವಲ ವಿಷಯಸಂಗ್ರಹವಲ್ಲ. ಜೀವನವನ್ನು ಉತ್ತಮಗೊಳಿಸುವ, ಪುರುಷಸಿಂಹರನ್ನು ಮಾಡುವ, ಸದ್ಗುಣಗಳನ್ನು ಮಾಡುವ, ಭಾವಗಳನ್ನು ಜೀರ್ಣಿಸಿಕೊಳ್ಳುವಂತೆ ಮಾಡುವ ವಿದ್ಯೆಬೇಕು. ಕೇವಲ ವಿಷಯ ಸಂಗ್ರಹವೇ ವಿದ್ಯಾಭ್ಯಾಸವಾಗಿದ್ದರೆ ಪ್ರಪಂಚದಲ್ಲಿ ಪುಸ್ತಕ ಭಂಡಾರಗಳೇ ಮಹಾಮುನಿಗಳಾಗುತ್ತಿದ್ದವು. ವಿಶ್ವಕೋಶಗಳೇ ಮಹರ್ಷಿಗಳಾಗುತ್ತಿದ್ದವು. "ಯಾವ ವಿದ್ಯಾ ವ್ಯಾಸಂಗದಿಂದ ಒಳ್ಳೆಯ ಶೀಲಗಳು ನಮ್ಮಲ್ಲಿ ಬೆಳೆಯುವವೋ, ಮಾನಸಿಕ ಶಕ್ತಿ ಹೆಚ್ಚುವುದೋ, ಬುದ್ಧಿ ವಿಶಾಲವಾಗುವುದೋ, ಯಾವುದರ ಸಹಾಯದಿಂದ ಸ್ವತಃ ತನ್ನ ಕಾಲ ಮೇಲೆ ನಿಲ್ಲಬಲ್ಲನೋ ಅಂತಹ ವಿದ್ಯೆ ಬೇಕು. ನಮಗೆ ಬೇಕಾಗಿರುವುದು, ಪರದೇಶದವರ ಅಧೀನಕ್ಕೆ ಒಳಪಡದೆ ನಮ್ಮದೇ ಆದ ಹಲವು ಶಾಸ್ತ್ರಗಳನ್ನು ಓದಿ, ಜೊತೆಗೆ ಆಂಗ್ಲ ಭಾಷೆ ಮತ್ತು ಪಾಶ್ಚಾತ್ಯ ವಿಜ್ಞಾನ-ತಂತ್ರಜ್ಞಾನ ಇವುಗಳ ಸಮನ್ವಯದಿಂದ ಕೂಡಿದ ವಿದ್ಯಾಭ್ಯಾಸ. "ಎಲ್ಲ ವಿದ್ಯಾ ವ್ಯಾಸಂಗದ ತರಬೇತಿಯ ಗುರಿ ಪುರುಷ ಸಿಂಹರನ್ನಾಗಿ ಮಾಡುವುದು. ಎಲ್ಲ ಅಭ್ಯಾಸಗಳ ಪರಮ ಗುರಿ ಮನುಷ್ಯನನ್ನು ಬೆಳೆಯುವಂತೆ ಮಾಡಬೇಕು. ಯಾವ ಅಭ್ಯಾಸದ ಬಲದಿಂದ ನಮ್ಮ ಇಚ್ಛಾಶಕ್ತಿಯ ಪ್ರವಾಹ ಮತ್ತು ಅದನ್ನು ವ್ಯಕ್ತಗೊಳಿಸುವ ವಿಧಾನ ನಮ್ಮ ಸ್ವಾಧೀನಕ್ಕೆ ಬರುವುದೋ ಅದೇ ವಿದ್ಯಾಭ್ಯಾಸ. ನಮ್ಮ ದೇಶಕ್ಕೆ ಇಂದು ಅವಶ್ಯವಾಗಿರುವುದು ಕಬ್ಬಿಣದಂತಹ ಮಾಂಸ ಖಂಡಗಳು. ಉಕ್ಕಿನಂತ ನರಗಳು, ಯಾವುದಕ್ಕೂ ಬಗ್ಗದ ಪ್ರಚಂಡ ಇಚ್ಛಾ ಶಕ್ತಿ" ಸರ್ವತೋಮುಖವಾಗಿ ಮನುಷ್ಯರನ್ನು ಧೀರನನ್ನಾಗಿ ಮಾಡುವ ವಿದ್ಯೆ ನಮ್ಮ ಇಂದಿನ ಅಗತ್ಯ ಇಂತಹ ವಿದ್ಯಾಭ್ಯಾಸಕ್ಕೆ ಪೂರಕವಾದ ಗುರು-ಶಿಷ್ಯ ಪರಂಪರೆಯನ್ನು ಅಸ್ತಿತ್ವಕ್ಕೆ ತರಬೇಕೆಂಬುದೇ ವಿವೇಕಾನಂದರ ಆಶಯ.

ವಿವೇಕಾನಂದರ ಅಭಿಪ್ರಾಯದಲ್ಲಿ "Education is the manifestation of the perfection already in man" ಮನುಷ್ಯನಲ್ಲಿ ಆಗಲೇ ಅಂತರ್ಗತವಾಗಿರುವ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ವಿದ್ಯಾಭ್ಯಾಸ. ಜ್ಞಾನ ಮಾನವನಿಗೆ ಸ್ವಾಭಾವಿಕವಾದುದು. ಯಾವ ಜ್ಞಾನವೂ ಹೊರಗಿನಿಂದ ಬರುವುದಿಲ್ಲ. ಎಲ್ಲವೂ ಪೂರ್ವದಲ್ಲಿಯೇ ಅಂತರ್ಗತವಾಗಿದೆ. ಮನುಷ್ಯನು ಏನನ್ನೂ ಕಲಿಯುತ್ತಾನೆಯೋ, ಅದು ಅನಂತ ಜ್ಞಾನ ನಿಧಿ, ಯಾದ ತನ್ನ ಆತ್ಮನ ಮೇಲೆ ಇದ್ದ ಮುಸುಕನ್ನು ತೆರೆದು ನಿಜವಾಗಿಯೂ ತನ್ನಲ್ಲಿ ತಾನೇ ಕಂಡು ಕೊಂಡಿದ್ದು.

ಮಗುವು ತನಗೆ ತಾನೇ ಕಲಿತುಕೊಳ್ಳುತ್ತಾನೆ. (Principle of Naturalism) ಬಾಹ್ಯ ಗುರು ಕೇವಲ ಸಲಹೆಯನ್ನು ಕೊಡುತ್ತಾನೆ. ಅದು ಅಂತರಂಗದಲ್ಲಿರುವ ಗುರುವನ್ನು ಜಾಗೃತನನ್ನಾಗಿ ಮಾಡಿ ವಿಷಯವನ್ನು ತಿಳಿದುಕೊಳ್ಳುವಂತೆ ಪ್ರೇರೆಪಿಸುತ್ತದೆ. ಈಗ ನಮ್ಮ ಇಂದ್ರಿಯ ಗ್ರಹಣ ಮತ್ತು ಆಲೋಚನಾ ಶಕ್ತಿಯಿಂದ ಅದು ನಮಗೆ ಸ್ಪಷ್ಟವಾಗಿ ನಮ್ಮ ಅಂತರಾಳದಲ್ಲಿ ನಾವು ಅದನ್ನು ಗ್ರಹಿಸುತ್ತೇವೆ. ಅತ್ಯಂತ ವಿಸ್ತಾರವಾದ ಆಲದ ಮರದ ಮೂಲ ಸಾಸಿವೆ ಕಾಳಿನಷ್ಟು ಚಿಕ್ಕದಾಗಿ ಅದರ ಬೀಜದಲ್ಲಿ ಅಡಕವಾಗಿರುವಂತೆ ವಿವೇಕಾನಂದರ ಪ್ರಕಾರ ಎಲ್ಲಾ ಜ್ಞಾನವು ಮನುಷ್ಯನಲ್ಲಿ ಸುಪ್ತವಾಗಿದೆ. ಇದನ್ನು ಜಾಗ್ರತಗೊಳಿಸಬೇಕಾಗಿದೆ ಅಷ್ಟೆ. ಇದೇ ಗುರುವಿನ ಕೆಲಸ. ತಮ್ಮ ಸ್ವಂತ ಬುದ್ಧಿಶಕ್ತಿಯನ್ನು ಉಪಯೋಗಿಸಿ ಇಂದ್ರಿಯಗಳನ್ನು ಸರಿಯಾದ ದಾರಿಯಲ್ಲಿ ಹೇಗೆ ಹೋಗಬೇಕು ಎಂದು ಮಾರ್ಗದರ್ಶನ ಮಾಡುವುದೇ ಗುರುವಿನ ಕಾರ್ಯ.

ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯಕ್ಕೆ ಅವಕಾಶವಿರಬೇಕು. 'ಹೊಡೆದರೆ ಕುದುರೆಯಾಗುವುದು' ಎಂಬ ಗಾದೆಯನ್ನು ಅನುಸರಿಸಿ ತನ್ನ ಕತ್ತೆಯನ್ನು ಹೊಡೆದಂತೆ, ನಮ್ಮ ಮಕ್ಕಳಿಗೆ ಕೊಡುವ ಶಿಕ್ಷಣ ಪದ್ಧತಿ ತೀರಾ ಅನುಚಿತವಾದುದು ಮತ್ತು ಅವೈಜ್ಞಾನಿಕವಾದುದು. ತಾಯಿ ತಂದೆಗಳ ಬಲವಂತಕ್ಕೆ ಒಳಪಟ್ಟ ನಮ್ಮ ಮಕ್ಕಳಿಗೆ ಬೆಳವಣಿಗೆಗೆ ಮುಕ್ತ ಅವಕಾಶ ದೊರಕುವುದಿಲ್ಲ. ವಿವೇಕಾನಂದರ ಪ್ರಕಾರ ಸಿಂಹವಾಗುವುದಕ್ಕಿ ನೀವು ಒಬ್ಬನಿಗೆ ಅವಕಾಶಕೊಡದೆ ಇದ್ದರೆ ಅವನು ನರಿಯಾಗುತ್ತಾನೆ.

ಮಕ್ಕಳ ಮುಂದೆ ಸ್ಪಷ್ಟವಾದ ಆದರ್ಶಗಳನ್ನು ಕೊಡಬೇಕು. ನಿಷೇಧಾತ್ಮಕ ಆಲೋಚನೆಗಳು ಯಾವಾಗಲೂ ಮನುಷ್ಯನನ್ನು ದುರ್ಬಲನನ್ನಾಗಿ ಮಾಡುವವು. ಮಕ್ಕಳನ್ನು ದೂಷಿಸುವುದಕ್ಕೆ ಬದಲಾಗಿ ಅವರ ಒಳ್ಳೆಯ ಕಾರ್ಯಗಳನ್ನು ಪ್ರೋತ್ಸಾಹಿಸಬೇಕು. ಭಾಷೆಯಲ್ಲಿ, ಸಾಹಿತ್ಯದಲ್ಲಿ, ಕಾವ್ಯದಲ್ಲಿ ಅಥವಾ ಕಲೆಯಲ್ಲಿ ಪ್ರತಿಯೊಂದರಲ್ಲಿಯೂ ನಾವು ಬೇರೆಯವರ ತಪ್ಪನ್ನು ಎತ್ತಿ ತೋರಿಸುತ್ತೇವೆ. ಆದರೆ ಅದು ಸಲ್ಲದು. ಅದಕ್ಕೆ ಬದಲಾಗಿ ಅದನ್ನು ಹೇಗೆ ಮತ್ತಷ್ಟು ಉತ್ತಮವಾಗಿ ಮಾಡಬಹುದು ಎಂಬುದನ್ನು ತೋರಿಸಬೇಕು. ಶಿಷ್ಯನ ಅವಶ್ಯಕತೆಗೆ ತಕ್ಕಂತೆ ನಾವು ಶಿಕ್ಷಣ ಕ್ರಮವನ್ನು ಬದಲಾಯಿಸಬೇಕು.



ಜ್ಞಾನವನ್ನು ಸಂಪಾದಿಸುವುದಕ್ಕೆ ಇರುವ ಏಕೈಕ ಮಾರ್ಗವೆಂದರೆ ಏಕಾಗ್ರತೆ. ಶಿಕ್ಷಣದ ಸಾರವೇ ಮಾನಸಿಕ ಏಕಾಗ್ರತೆ ಅತ್ಯಂತ ಮೂಢನಿಂದ ಹಿಡಿದು ಅತುತ್ತಮ ಯೋಗಿಯವರೆಗೆ ಪ್ರತಿಯೊಬ್ಬರೂ ಜ್ಞಾನಾರ್ಜನೆಗೆ ಒಂದೇ ಮಾರ್ಗವನ್ನು ಅನುಸರಿಸಬೇಕು. ಶಿಷ್ಯನಾಗಿರುವವನು ಇಂತಹ ದೃಢವಾದ ಏಕಾಗ್ರತೆಯಿಂದ ಮಾತ್ರ ಯಶಸ್ಸನ್ನು ಸಂಪಾದಿಸಬಲ್ಲ. ಏಕಾಗ್ರತೆಯ ಶಕ್ತಿ ಹೆಚ್ಚಿದಷ್ಟೂ ನಮ್ಮ ಜ್ಞಾನಾರ್ಜನೆಯೂ ಹೆಚ್ಚಾಗುವುದು. ಸಾಮಾನ್ಯ ಮನುಷ್ಯನು ಶೇಕಡಾ ತೊಂಭತ್ತರಷ್ಟು ಮಾನಸಿಕ ಶಕ್ತಿಯನ್ನು ವ್ಯರ್ಥಮಾಡುತ್ತಿರುವನು. ಇದರರಿಂದಾಗಿಯೇ ಅವನು ಪುನಃ ಪುನಃ ತಪ್ಪುಗಳನ್ನೆಸಗುತ್ತಾನೆ. ಪಳಗಿದ ಮನುಷ್ಯನಾಗಲಿ ಅಥವಾ ಮನಸ್ಸಾಗಲಿ ಎಂದಿಗೂ ತಪ್ಪು ಮಾಡುವುದಿಲ್ಲ. ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೇ ಅವುಗಳಲ್ಲಿರುವ ಏಕಾಗ್ರತೆಯ ಶಕ್ತಿಯ ಅಂತರ. ಪ್ರಾಣಿಗಳಿಗೆ ಅತ್ಯಲ್ಪ ಏಕಾಗ್ರತೆಯ ಶಕ್ತಿ ಇದೆ. ಈ ಏಕಾಗ್ರತೆಯಲ್ಲಿರುವ ವ್ಯತ್ಯಾಸವೇ ಒಬ್ಬನಿಗೂ ಮತ್ತೊಬ್ಬನಿಗೂ ಇರುವ ಮುಖ್ಯವಾದ ಬೇಧಭಾವ (Individual Differences) ಕ್ಕೆ ಕಾರಣ.

ವಿವೇಕಾನಂದರ ಪ್ರಕಾರ ಏಕಾಗ್ರತೆಯ ಸಂವರ್ಧನೆಗೆ ಶಿಷ್ಯನಾಗಿರುವವನು ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪರಿಪಾಲಿಸಬೇಕು. ವಿದ್ಯಾಭ್ಯಾಸದ ಅವಧಿಯಲ್ಲಿ ಕನಿಷ್ಠ ಹನ್ನೆರಡು ವರ್ಷಗಳ ಬ್ರಹ್ಮಚರ್ಯ ಅನಿವಾರ್ಯ. ಶುದ್ಧ ಬ್ರಹ್ಮಚರ್ಯ ಮಹಾ ಬುದ್ಧಿಶಕ್ತಿಯನ್ನು ಮತ್ತು ಆತ್ಮಶಕ್ತಿಯನ್ನೂ ತಂದುಕೊಡುತ್ತದೆ. ಕಾಮ ನಿಗ್ರಹವೇ ಅತ್ಯುತ್ತಮವಾದ ಸಾಧನೆಗೆ ದಾರಿ. ಯಾವಾಗಲೂ ಎಂತಹ ಸನ್ನಿವೇಶದಲ್ಲಿಯೂ ಕಾಯಾ-ವಾಚಾ-ಮನಸಾ ಇಂದ್ರಿಯಗಳನ್ನು ನಿಗ್ರಹಿಸುವುದೇ ಬ್ರಹ್ಮಚರ್ಯ. ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಿರುವ ಶಿಷ್ಯನು ತ್ರಿಕರಣ ಪೂರ್ವಕವಾಗಿ ಪರಿಶುದ್ಧನಾಗಿರಬೇಕು. ಹೀನ ಆಲೋಚನೆ ಹೀನ ಕೆಲಸದಷ್ಟೇ ಕೆಟ್ಟದ್ದು.

ಶಿಷ್ಯನಲ್ಲಿರಬೇಕಾದ ಇನ್ನೊಂದು ಪ್ರಮುಖ ಅರ್ಹತೆಯೇ ಶ್ರದ್ಧೆ. ಒಬ್ಬನಿಗೂ ಮತ್ತೊಬ್ಬನಿಗೂ ಇರುವ ವ್ಯತ್ಯಾಸಕ್ಕೆ ಇನ್ನೊಂದು ಪ್ರಮುಖ ಕಾರಣ ಅವರಲ್ಲಿರುವ ಶ್ರದ್ಧೆಯ ತಾರತಮ್ಯ. ಯಾವುದು ಒಬ್ಬನನ್ನು ಮಹಾಪುರುಷನನ್ನಾಗಿ ಮಾಡುವುದೋ ಅದೇ ಶ್ರದ್ಧೆ. ಯಾರು ತಾವು ನಿರ್ಬಲರೆಂದು ತಿಳಿಯುತ್ತಾರೆಯೋ ಅಂತವರು ನಿರ್ಬಲರೇ ಆಗುತ್ತಾರೆ. ಪಾಶ್ಚಿಮಾತ್ಯ ಜನಾಂಗದಲ್ಲಿ ಅಷ್ಟೊಂದು ಪ್ರಭೂತವಾದ ಬಾಹ್ಯ ಸಂಪತ್ತು ಮತ್ತು ಶಕ್ತಿ ಸಂಗ್ರಹವಾಗುವುದಕ್ಕೆ ಅವರ ಶ್ರದ್ಧೆಯಿಂದ ಕೂಡಿದ ದುಡಿಮೆಯೇ ಕಾರಣ. ಅವರಿಗೆ ತಮ್ಮ ಬಾಹು ಬಲದಲ್ಲಿ ನಂಬಿಕೆಯಿದೆ. ಭಾರತೀಯರು ಆತ್ಮ ಸಾಮರ್ಥ್ಯವನ್ನು ನಂಬಿದರೆ ಮತ್ತಷ್ಟು ಹೆಚ್ಚು ದಕ್ಷತೆಯಿಂದ ಕಾರ್ಯ ನಿರ್ವಹಿಸಬಹುದು.

ಯಾವ ವಿದ್ಯಾರ್ಥಿಗಳು ತಾವು ಯಾವ ಕೆಲಸಕ್ಕೂ ಬಾರದವರೆಂದು ಆಲೋಚಿಸುತ್ತಾರೆಯೋ ಅಂತಹ ವಿದ್ಯಾರ್ಥಿಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಯಾರು ಅಹೋರಾತ್ರಿ ತಾನು ಕಷ್ಟದಲ್ಲಿರುವವನೆಂದೂ, ದೀನನೆಂದೂ ಅಪ್ರಯೋಜಕನೆಂದೂ ಆಲೋಚಿಸುತ್ತಿರುವನೋ ಅವನು ಅಪ್ರಯೋಜಕನೇ ಆಗುತ್ತಾನೆ. ಶಿಷ್ಯನಲ್ಲಿರಬೇಕಾದ ಅತೀವ ಅಪೇಕ್ಷಿತವಾದ ಗುಣವೇ ಆತ್ಮ ವಿಶ್ವಾಸ. "ನಾವು ಭಗವಂತನ ಮಕ್ಕಳು, ಅನಂತ ಜ್ಞಾನಜ್ಯೋತಿಯ ಕಿಡಿಗಳು. ನಾವು ಹೇಗೆ ಅಪ್ರಯೋಜಕರಾಗಬಲ್ಲೆವು? ನಾವೇ ಸರ್ವಸ್ವ ಎಲ್ಲವನ್ನೂ ಸಮರ್ಥವಾಗಿ ನಿರ್ವಹಿಸಬಲ್ಲೆವು. ನಾವು ಎಲ್ಲವನ್ನೂ ಮಾಡಬಲ್ಲೆವು" ಎಂಬ ಆತ್ಮ ಶ್ರದ್ಧೆಯೇ ವಿದ್ಯಾರ್ಥಿಗಳ ಅಭ್ಯುದಯದ ಮೂಲಮಂತ್ರ, ಈ ಸಿದ್ಧಾಂತವನ್ನೇ ಸ್ವಾಮಿ ವಿವೇಕಾನಂದರು ತಾವು ಹೋದ ಕಡೆಗಳಲ್ಲೆಲ್ಲ ಪ್ರತಿಪ್ರಾದಿಸುತ್ತಿದ್ದರು. ಒಬ್ಬನು ಒಂದು ಸಣ್ಣ ನೀರ ಗುಳ್ಳೆಯಾಗಿರಬಹುದು. ಮತ್ತೊಬ್ಬನು ಬೆಟ್ಟದೆತ್ತರದ ದೊಡ್ಡ ಅಲೆಯಾಗಿರಬಹುದು. ಆದರೂ ಈ ನೀರ ಗುಳ್ಳೆ ಮತ್ತು ಅಲೆಯ ಹಿಂದೆ ಅನಂತ ಸಾಗರವಿದೆ ಎಂಬುದನ್ನು ಮರೆಯಕೂಡದು.

ವಿವೇಕಾನಂದರ ವಿಚಾರದಲ್ಲಿ ವಿದ್ಯಾಭ್ಯಾಸಕ್ಕೆ ಗುಗ್ರಹವಾಸವೇ ಹೆಚ್ಚು ಸೂಕ್ತವಾದುದು. ಗುರುವಿನ ಆದರ್ಶ ವ್ಯಕ್ತಿತ್ವದ ಜೀವನವಿಲ್ಲದೆ ವಿದ್ಯಾಭ್ಯಾಸವಿಲ್ಲ. ವಿದ್ಯಾರ್ಥಿಯಾಗಿರುವವನು ಯಾರ ಶೀಲ ಪ್ರಕಾಶಮಾನವಾಗಿ ಬೆಳಗುತ್ತಿದೆಯೋ ಅಂತಹವರ ಹತ್ತಿರ ಇರಬೇಕು. ಪರಮ ಪವಿತ್ರವಾದ ಉಪದೇಶದ ಸಚೇತನವಾದ ಜೀವಂತ ಉದಾಹರಣೆಯೊಂದು ಅವನ ಮುಂದೆ ಇರಬೇಕು. ನಮ್ಮ ದೇಶದಲ್ಲಿ ವಿದ್ಯಾದಾನ ಮಾಡುವವರು ಯಾವಾಗಲೂ ತ್ಯಾಗಿಗಳಾಗಿದ್ದರು. ಈಗಲೂ ಸಹ ವಿದ್ಯಾದಾನದ ಹೊಣೆಗಾರಿಕೆ ಪುನಃ ತ್ಯಾಗಿಗಳಿಂದಲೇ ಸಾಧ್ಯವಾಗಬೇಕು.

**ಶಿಷ್ಯನ ಗುಣಗಳು :** ಏಕಾಗ್ರತೆ, ಬ್ರಹ್ಮಚರ್ಯ, ಶ್ರದ್ಧೆ, ಆತ್ಮವಿಶ್ವಾಸ ಈ ಗುಣಗಳ ಜೊತೆಯಲ್ಲಿ ಶಿಷ್ಯನಾಗಿರುವವನು ಇನ್ನು ಕೆಲವು ಗುಣಗಳನ್ನು ಹೊಂದಿರಬೇಕು. ಅವನಲ್ಲಿ ಭಾವ ಶುದ್ಧಿ (Purity), ನಿಜವಾದ ಜ್ಞಾನಾಕಾಂಕ್ಷೆ (A real

after Knowledge), ಮತ್ತು ಸತತ ಪ್ರಯತ್ನ ಶೀಲತೆ (Perseverance) ಈ ಮೂರು ಗುಣಗಳು ಅತ್ಯಂತ ಅವಶ್ಯವಾಗಿ ಅಡಕವಾಗಿರಬೇಕು.ಕಾಯ–ವಾಚಾ–ಮನಸಾ ಪವಿತ್ರತೆ ಅತ್ಯಂತ ಅವಶ್ಯಕ. ಹೊಸತನ್ನು ಅರಿತುಕೊಳ್ಳಬೇಕು ಎಂಬ ಜ್ಞಾನ ದಾಹ ಅವನಲ್ಲಿ ಸದಾ ತುಂಬಿರಬೇಕು. ಇವುಗಳ ಜೊತೆಯಲ್ಲಿ ಶ್ರಮವರಿಯದ ಸತತ ಪ್ರಯತ್ನ ಸೇರಿಕೊಂಡರೆ ಅವನು ಖಂಡಿತಕ್ಕೂ ತನ್ನ ಬದುಕಿನಲ್ಲಿ ಯಶಸ್ವಿಯಾಗುತ್ತಾನೆ.

**ಗುರುವಿನಲ್ಲಿರಬೇಕಾದ ಮೂರು ಪ್ರಮುಖ ಅಂಶಗಳು :** ಗುರುವಿಗೆ ವೇದ ಶಾಸ್ತ್ರಾದಿಗಳ ಸತ್ವ ಚೆನ್ನಾಗಿ ಅರಿವಿರಬೇಕು. ಪ್ರಪಂಚವೇ ಬೈಬಲ್ಲು, ಕುರಾನ್, ವೇದಗಳನ್ನು ಓದುತ್ತದೆ. ಆದರೆ ಅವೆಲ್ಲ ಧರ್ಮದ ಒಣ ಮೂಳೆಗಳು. ಕೇವಲ ಶಬ್ದಾಡಂಬರದಲ್ಲೇ ನಿರತನಾದ ಗುರು ಅರ್ಥವನ್ನು ಮರೆಯುವನು. ಅಂದರೆ ಶಾಸ್ತ್ರದ ಅರ್ಥ ಜ್ಞಾನ ಗುರುವೆನಿಸಿಕೊಂಡವನಲ್ಲಿ ಇರಬೇಕು.

ಗುರುವಿನಲ್ಲಿರಬೇಕಾದ ಎರಡನೆಯ ಗುಣವೇ ಪಾಪವಿಲ್ಲದಿರುವುದು. ಗುರುವಾಗಿರುವವನು ಅತ್ಯಂತ ಪರಿಶುದ್ಧನಾಗಿರಬೇಕು. ಹಾಗಿದ್ದರೆ ಮಾತ್ರ ಅವನ ಮಾತಿಗೆ ಗೌರವ ಬರುವುದು. ನಿಜವಾದ ಮತ್ತು ಸಂತೋಷವನ್ನುಂಟು ಮಾಡುವ ಯಾವುದೋ ಒಂದು ವಿಧದ ಪ್ರವಾಹ ಗುರುವಿನಿಂದ ಬಂದು ಶಿಷ್ಯನಿಗೆ ಪ್ರವೇಶಿಸುವುದು. ಆದ್ದರಿಂದ ಗುರು ಅಂತರಂಗಿಕವಾಗಿ ಪರಿಶುದ್ಧನಾಗಿರಬೇಕು.

ಮೂರನೇಯ ಗುಣವೇ ಅವನ ಸ್ವಾರ್ಥರಹಿತ ಉದ್ದೇಶ. ದ್ರವ್ಯ–ಕೀರ್ತಿ ಮುಂತಾದ ಸ್ವಾರ್ಥದಿಂದ ಪ್ರೇರೆಪಿತನಾಗಿ ಬೋಧಿಸಕೂಡದು. ಗುರುವಿಗೆ ಉಪದೇಶ ಸಹಜ ಪ್ರೇಮದಿಂದ ಕೂಡಿದ್ದಾಗಿರಬೇಕು. ಆಧ್ಯಾತ್ಮಿಕ ಶಕ್ತಿಯನ್ನು ಧಾರೆಯರೆಯಬೇಕಾದರೆ ಇರುವ ಏಕೈಕ ಮಾರ್ಗವೇ ಪ್ರೀತಿ–ವಿಶ್ವಾಸದ ಮಾರ್ಗ.

ವಿವೇಕಾನಂದರು ಸುಸ್ಪಷ್ಟವಾಗಿ ಪ್ರತಿಪಾದಿಸಿರುವಂತೆ ಶಿಷ್ಯನಾಗಿರುವವನು ಗುರುವಿನ ಮಾತಿನಲ್ಲಿ ಶ್ರದ್ಧೆ, ವಿನಯ, ಅವರು ಹೇಳಿದಂತೆ ಕೇಳುವುದು, ಅವರಿಗೆ ಗೌರವ ತೋರಿಸುವುದು– ಇವುಗಳನ್ನು ರೂಢಿಸಿಕೊಳ್ಳದಿದ್ದಲ್ಲಿ ಯಾವ ರೀತಿಯಲ್ಲಿಯೂ ಉನ್ನತಿಯನ್ನು ಹೊಂದಲಾರನು. ಇಂತಹ ಗುರು ಶಿಷ್ಯ ಸಂಬಂಧವನ್ನು ಯಾವ ದೇಶದಲ್ಲಿ ಅಲ್ಲಗಳೆಯುವರೋ, ಅಲ್ಲಿ ಗುರು ಕೇವಲ ಉಪನ್ಯಾಸಕನಾಗಿರುತ್ತಾನೆ. ಉಪನ್ಯಾಸಕನು ಕೇವಲ ತನ್ನ ವೇತನವನ್ನು ಎದುರು ನೋಡುತ್ತಿರುತ್ತಾನೆ. ವಿವೇಕಾನಂದರು ಗುರುಶಿಷ್ಯ ಸಂಬಂಧದ ಕುರಿತಾಗಿ ಇನ್ನೂ ಒಂದು ಮಾತನ್ನು ಸ್ಪಷ್ಟಪಡಿಸಿದ್ದಾರೆ. ದೇವರಂತೆ ನಿಮ್ಮ ಗುರುವನ್ನು ಪೂಜಿಸಿ, ಆದರೆ ವಿಮರ್ಶೆ ಮಾಡದೆ ಅವನು ಹೇಳಿದ ಮಾತನ್ನು ಪರಿಪಾಲಿಸಿರಿ. ನಿಮ್ಮ ವಿವೇಕಕ್ಕನುಗುಣವಾಗಿ ಅವನನ್ನು ಪ್ರೀತಿಸಿ ಆದರೆ ಸ್ವತಂತ್ರವಾಗಿ ಆಲೋಚಿಸಿ. ಅರಿವಿನಿಂದ ಕೂಡಿದ ಪ್ರೀತಿಯಿರಲಿ. ಇಂತಹ ಪರಿಪೂರ್ಣ ಗುರುವನ್ನು ಪಡೆದುಕೊಂಡ ಬಳಿಕ ಶಿಷ್ಯನಿಗೆ ಗುರುವಿನಲ್ಲಿ ಅಚಲ ಶ್ರದ್ಧೆಯಿರಬೇಕು. ಗುರುವಿನ ಸಂಬಂಧ ಶಿಷ್ಯನ ಜೀವನದಲ್ಲಿ ಅತಿ ನಿಕಟವಾದುದು. ವಿವೇಕಾನಂದರೇ ಒಮ್ಮೆ ಹೇಳಿರುವ ಹಾಗೆ–" ನನ್ನ ಜೀವನದ ಅತಿ ನಿಕಟ ಪ್ರೀತಿ ಪಾತ್ರ ಬಂಧುವೆಂದರೆ ಗುರು. ನಂತರ ನನ್ನ ತಾಯಿ– ತಂದೆಗಳು. ಗುರುವಿಗೆ ಪ್ರಥಮ ಗೌರವ. ನನ್ನ ತಂದೆ ಮಾಡು ಎಂದದ್ದನ್ನು, ಗುರು ಮಾಡಬೇಡ ಎಂದರೆ, ನಾನು ಅದನ್ನು ಮಾಡುವುದಿಲ್ಲ. ಗುರು ನನಗೆ ಮುಕ್ತಿ ನೀಡುವನು. ತಂದೆ ತಾಯಿಗಳು ನನಗೆ ದೇಹ ಕೊಡುವರು. ಆದರೆ ಗುರು ಹೊಸ ಬಾಳನ್ನು ಕೊಡುವನು.

ಪ್ರಾಯಶಃ ಜಗತ್ತಿನ ಬೇರೆಲ್ಲೂ ಸಹ ರಾಮಕೃಷ್ಣ ಪರಮಹಂಸರರಂತಹ ಗುರುಗಳನ್ನು ವಿವೇಕಾನಂದರಂತಹ ಶಿಷ್ಯನನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಭಾರತೀಯ ಗುರುಶಿಷ್ಯ ಪರಂಪರೆಗೆ ಇವರೇ ಅನುಪಮ ಆದರ್ಶವೆಂದರೆ ತಪ್ಪಾಗಲಾರದು.

ವಿವೇಕಾನಂದರ ಗುರು–ಶಿಷ್ಯ ಸಂಬಂಧ ಪ್ರತಿಪಾದನೆಯ ದೃಷ್ಟಿ ಪ್ರಾಚೀನ ಭಾರತೀಯ ಪರಂಪರೆಗೆ ಅನುಗುಣವಾಗಿದೆ. ಮಾಹಿತಿ ಸಂಗ್ರಹಕ್ಕಿಂತ ಆಧ್ಯಾತ್ಮ ಸಾಧನೆಗೆ ಮಹತ್ವ ನೀಡುವ ಶಿಕ್ಷಣದ ಅಗತ್ಯವನ್ನು ಅವರು ಪ್ರತಿಪಾದಿಸಿದರು. ಆಧುನಿಕ ಭಾರತೀಯ ಶಿಕ್ಷಣ ಪದ್ಧತಿ ಮಾಹಿತಿ ಸಂಗ್ರಹ ಕೇಂದ್ರೀಕೃತವಾಗಿದೆ. ಜೀವನೋಪಾಯಕ್ಕಾಗಿ ಅದು ಅಗತ್ಯ. ಆದರೆ ಆಂತರಿಕ ಬೆಳಕು ಕಾಣದಿದ್ದರೆ ಬಾಹ್ಯೋನ್ಮುಖಿಯಾದ ಅಂತಹ ಶಿಕ್ಷಣ ಪದ್ಧತಿ ಚಲಿಸುವ ಪುಸ್ತಕಗಳನ್ನು ನಿರ್ಮಿಸಿತೇ ಹೊರತು ಜೀವಂತ ಮನುಷ್ಯರನ್ನಲ್ಲ. ಆದ್ದರಿಂದ ಆಧ್ಯಾತ್ಮಿಕ ಚಿಂತನೆಯನ್ನು ಪ್ರಚೋದಿಸುವ ಅಂತರಗದ ಸತ್ಯ ಶೋಧನೆಯ ಮಾರ್ಗದಲ್ಲಿ ಮುನ್ನೆಡೆಸಲು ಪ್ರೇರೆಪಿಸುವ ವಿವೇಕಾನಂದರ ಈ ಚಿಂತನೆ ಇಂದು ತೀರಾ ಪ್ರಸ್ತುತವಾಗಿದೆ.

■■

ಸಂಸ್ಕೃತ ಪ್ರಾಧ್ಯಾಪಕರು, ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ,ವಿಜಯಪುರ



Scanned by TapScanner